# ಹರಿದು ಬರುತ್ತಿದೆ ಬಂಡವಾಳ



ರಾಜ್ಯದಲ್ಲಿ ಅಂತರಾಷ್ಟ್ರೀಯ ಹಾಗೂ ರಾಷ್ಟ್ರೀಯ ಬಂಡವಾಳವನ್ನು ಆಕರ್ಷಿಸಲು 'ಇನ್‌ವೆಸ್ಟ್ ಕರ್ನಾಟಕ– ೨೦೧೬'ರ ಸಮಾವೇಶವನ್ನು ಬೆಂಗಳೂರಿನಲ್ಲಿ ಆಯೋಜಿಸಿತ್ತು. ಸಮಾವೇಶದಲ್ಲಿ ಒಟ್ಟು ೧.೨೭ ಲಕ್ಷ ಕೋಟಿ ರೂ.ಗಳ ಪ್ರಸ್ತಾಪಿತ ಬಂಡವಾಳ ಮತ್ತು ೧.೯ ಲಕ್ಷ ಉದ್ಯೋಗ ಸೃಷ್ಟಿಯ ಸಾಮರ್ಥ್ಯವುಳ್ಳ ೧೨೨ ಒಪ್ಪಂದಗಳಿಗೆ ಸಹಿ ಹಾಕಲಾಯಿತು.

೨೦೧೫ರಲ್ಲಿ 'ಇನ್‌ವೆಸ್ಟ್ ಕರ್ನಾಟಕ ೨೦೧೬' ಘೋಷಣೆಯಾದಾಗಲೇ, ೧.೭೭ ಲಕ್ಷ ಕೋಟಿ ರೂ.ಗಳ ಮೊತ್ತದ ೧೦೮೦ ಯೋಜನೆಗಳಿಗೆ ವಿವಿಧ ಇಲಾಖೆಗಳ ಏಕಗವಾಕ್ಷಿ ಏಜೆನ್ಸಿಗಳು ಮತ್ತು ಎಚ್‌ಎಲ್‌ಸಿಸಿಯಿಂದ ಅನುಮೋದನೆಗೊಂಡಿದ್ದವು. ಜೊತೆಗೆ ವಿಶ್ವದಾದ್ಯಂತ ಕಂಪನಿಗಳಿಂದ ಬಂಡವಾಳ ಹೂಡಿಕೆಯ ಆಸಕ್ತಿ ಹೊಂದಿರುವ ಬಗ್ಗೆ ಮಾಹಿತಿ ಬಂದಿದೆ.

ಕಳೆದ ಮೂರು ವರ್ಷಗಳಲ್ಲಿ ಒಟ್ಟು ೧೪೪೩ ಯೋಜನೆಗಳನ್ನು ಅನುಮೋದನೆಗೊಂಡಿವೆ. ಈ ಮೂಲಕ ಒಟ್ಟು ೨೭,೪೨೦೦ ಕೋಟಿ ರೂ.ಗಳ ಬಂಡವಾಳದ ಹೂಡಿಕೆಯೊಂದಿಗೆ ೭೦,೯೬೩೬ ಉದ್ಯೋಗಾವಕಾಶ ಸೃಷ್ಟಿಸಿದೆ.

ಕಳೆದ ಮೂರು ವರ್ಷಗಳಲ್ಲಿ ಅನುಮೋದನೆ ನೀಡಿದ ೧೪೪೩ ಬೃಹತ್ ಕೈಗಾರಿಕಾ ಯೋಜನೆಗಳ ಪೈಕಿ ಒಟ್ಟು ೪೮ ಬೃಹತ್ ಕೈಗಾರಿಕೆಗಳು ಈಗಾಗಲೆ ಸ್ಥಾಪನೆಯಾಗಿವೆ. ಇದರಿಂದ ೧೦,೬೬೮.೨೮ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯಾಗಿದೆ. ೫೨,೮೯೪ ಜನರಿಗೆ ಉದ್ಯೋಗ ದೊರಕಿದೆ.

ಇದೇ ಅವಧಿಯಲ್ಲಿ ರಾಜ್ಯದಲ್ಲಿ ೮೦,೩೬೪ ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳು ಸ್ಥಾಪನೆಯಾಗಿದೆ. ಇದರಿಂದ ರೂ. ೧೦,೮೬೬.೭೦ ಕೋಟಿ ಬಂಡವಾಳ ಹೂಡಿಕೆಯಾಗಿದೆ. ೫,೮೩,೭೯ ಲಕ್ಷ ಜನರಿಗೆ ಉದ್ಯೋಗ ದೊರಕಿದೆ. ಕಳೆದ ಮೂರು ವರ್ಷಗಳಲ್ಲಿ ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗೆಗಳಿಗೆ ೨೧೪.೮೫ ಕೋಟಿ ರೂ.ಗಳ ಬಂಡವಾಳ ಸಹಾಯಧನವನ್ನು ೬೬೫೪ ಘಟಕಗಳಿಗೆ ಬಿಡುಗಡೆ ಮಾಡಿದೆ.

ದುಡಿಯುವ ಕೈಗಳಿಗೆ ಕೆಲಸ ಕೊಡುವುದೇ ಸರ್ಕಾರದ ಮುಖ್ಯ ಗುರಿ. ರಾಜ್ಯದಲ್ಲಿ ನಡೆಯುತ್ತಿರುವ ಕೈಗಾರಿಕಾ ಕ್ರಾಂತಿ ಯುವಜನರ ಭವಿಷ್ಯದ ಬಾಳಿಗೆ ಹೊಸ ಹೊಂಗಿರಣ ಮೂಡಿಸಿದೆ.

## ಬೆಂಗಳೂರು: ನವೋದ್ಯಮಗಳ ರಾಜಧಾನಿ

ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ರಾಜ್ಯ ಕರ್ನಾಟಕ. ಈ ಅಗ್ರಶ್ರೇಣಿಯನ್ನು ಕಾಯ್ದುಕೊಳ್ಳಲು, ಅಗತ್ಯ ಕ್ರಮಗಳನ್ನು ಕೈಗೊಳ್ಳುವುದರೊಂದಿಗೆ ಗ್ರಾಮೀಣ ಪ್ರದೇಶದಲ್ಲಿ ಮಾಹಿತಿ ತಂತ್ರಜ್ಞಾನದ ಶಿಕ್ಷಣವನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡು ಹೊಸ ಪ್ರಯತ್ನಗಳು ಫಲ ನೀಡುತ್ತಿವೆ. ಜಾಗತಿಕವಾಗಿ ಬೆಂಗಳೂರು 'ಸ್ಟಾರ್ಟ್‌ಅಪ್' ಚಟುವಟಿಕೆಗಳಿಂದ ಗಮನ ಸೆಳೆದಿದೆ. ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಪ್ರೋತ್ಸಾಹದಿಂದ ಬ್ರ್ಯಾಂಡ್ ಬೆಂಗಳೂರು ಭಾರತದ ಸ್ಟಾರ್ಟ್ ಅಪ್ ರಾಜಧಾನಿಯಾಗಿ ಗುರುತಿಸಿಕೊಂಡಿದೆ.

## ಸಂಚಾರ ಕ್ರಾಂತಿಗೆ ಮೆಟ್ರೊ ಭಾಗ್ಯ

ಬೆಂಗಳೂರಿನ ಸಂಚಾರ ದಟ್ಟಣೆಗೆ ಪರ್ಯಾಯ ಎನಿಸಿರುವ 'ಬೆಂಗಳೂರು ಮೆಟ್ರೋ' ರಾಜಧಾನಿಯ ಟ್ರಾಫಿಕ್ ಸಮಸ್ಯೆಗೆ ಸೂಕ್ತ ಪರಿಹಾರ ಒದಗಿಸುವಲ್ಲಿ ಯಶಸ್ವಿಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ೨೦೧೬ರ ಏಪ್ರಿಲ್‌ನಲ್ಲಿ ಉದ್ಘಾಟಿಸಿದ ಪೂರ್ವ–ಪಶ್ಚಿಮ ಕಾರಿಡಾರ್‌ನ ೧೮ ಕಿ.ಮೀ ನೇರಳೆ ಮಾರ್ಗದ ಒಂದು ತುದಿಯಿಂದ ಇನ್ನೊಂದು ತುದಿಗೆ ೪೦ ನಿಮಿಷಗಳಲ್ಲಿ ತಲುಪಬಹುದು. ಇದೇ ಮಾರ್ಗವನ್ನು ರಸ್ತೆ ಮಾರ್ಗವಾಗಿ ತಲುಪಲು ಸುಮಾರು ೨.೫

